ಕೈಯಿಂದ ಬಾಳೆಹಣ್ಣು ಕಸಿಯಬಲ್ಲ, ಕಾಡು ಹಂದಿಯ ಬಾಲಕ್ಕೆ ಕೈಯಿಕ್ಕಬಲ್ಲ ಹನ್ನ ಬೆಂಗಳೂರಿನಲ್ಲಿ ದಾರಿ ತಪ್ಪಿ ಅನಾಥನಾಗುವ ಒಂದು ಚಿತ್ರ ನಮ್ಮನ್ನು ಕಾಡುವಷ್ಟೇ ಈ ಕತೆಯ ಕೊನೆ ಕೂಡ ಬಹುಕಾಲ ಸತಾಯಿಸುತ್ತ ಉಳಿಯುತ್ತದೆ. ಯಾರೂ ಕಲ್ಪಿಸಲಾರದ, ಆಘಾತವನ್ನುಂಟು ಮಾಡುವ ಈ ಅಂತ್ಯ ಸುಲಭವಾಗಿ ಜೀರ್ಣವಾಗಲಾರದ, ಸದ್ಯದ ನಮ್ಮ ದುರಂತವನ್ನು ಕಣ್ಣಿಗೆ ಕಟ್ಟುವಂತೆ ಮಾಡುವ ಅಂತ್ಯ.

'ಶಾಂತಿ ಕುಟೀರ' ಕತೆ ತನ್ನ ಚೌಕಟ್ಟಿನ ನೆಲೆಯಿಂದ ಒಂದು ಕಾದಂಬರಿ. ಆದರೆ ಅದರ ಅಂತ್ಯದ ನೆಲೆಯಿಂದ ಪಕ್ಕಾ ಕತೆ. ನಿರಂಜನರ ಕಾದಂಬರಿ 'ರಂಗಮ್ಮನ ವಠಾರ'ದಂತೆ ಒಂದು ಅಪಾರ್ಟ್‌ಮೆಂಟಿನ ಹತ್ತು ಹಲವು ಸಂಸಾರಗಳ ಅಂತರಂಗ ಬಹಿರಂಗವನ್ನು ಒಂದರೊಳಗೊಂದು ಸೇರಿಕೊಂಡಂತೆ ನಿರೂಪಿಸುತ್ತ ಹೋಗುವ ನುಗಡೋಣಿಯವರು ಕತೆಯ ಕೇಂದ್ರದಲ್ಲಿ ಒಂದು ಹೃದಯವಿದ್ರಾವಕ ದುರಂತವನ್ನು ಇಟ್ಟಿದ್ದಾರೆ. ಅದು ಅಪಾರ್ಟ್‌ಮೆಂಟಿನ ರಾಜಕಾರಣ, ಆಸ್ತಿ ಜಗಳ, ಕಾರ್ಪೊರೇಟ್ ವಲಯದ ಹುನ್ನಾರಗಳೆಲ್ಲವನ್ನೂ ಮೀರಿ ಅಲ್ಲಿನ ಬಡಪಾಯಿ ನಿವಾಸಿಗಳನ್ನು ಕಾಳಸರ್ಪದಂತೆ ಸುತ್ತಿಕೊಳ್ಳುವುದು ನಮ್ಮ ಇಂದಿನ ವರ್ತಮಾನದ ಚಿತ್ರವನ್ನು ಕಟ್ಟಿಕೊಡುತ್ತಿದೆಯೆನ್ನಬೇಕೇ? ಕೊಲೆ, ಸುಲಿಗೆ, ವೇಶ್ಯಾವಾಟಿಕೆ, ಭಯೋತ್ಪಾದನೆ, ಕಾಳಸಂತೆ, ವಾಮಮಾರ್ಗ, ಮಾದಕವಸ್ತುಗಳ ಸಾಗಾಟ ಎಂದೆಲ್ಲ ಕಂಡುಕೇಳರಿಯದ ಎಲ್ಲಾ ವ್ಯವಹಾರಗಳ ಕೇಂದ್ರವೂ ಆಗಿರುವ ಮಧ್ಯಮವರ್ಗದವರೂ, ದಲ್ಲಾಳಿಗಳೂ, ವಶೀಲಿಯುಳ್ಳವರೂ ಒಟ್ಟಿಗೇ ಬದುಕುತ್ತಿರುವ ಮೂರಂತಸ್ತಿನ(!) ಈ ಅಪಾರ್ಟ್‌ಮೆಂಟ್ ಒಂದು ದೇಶದ ರೂಪಕವೆನ್ನಬೇಕೆ? ಕತೆಯ ಕೊನೆಯಲ್ಲಷ್ಟೇ ಎದುರಾಗುವ ವಿಚಿತ್ರ ವಿದ್ಯಮಾನ ಇವತ್ತು ನಾವು ನಮ್ಮ ವರ್ತಮಾನವನ್ನು ಕಾಣುವ, ವಿಶ್ಲೇಷಿಸುವ ಮತ್ತು ಪ್ರತಿಕ್ರಿಯಿಸುವ ಬಗೆಯಲ್ಲಿಯೇ ಇರುವ ಅಸಾಂಗತ್ಯ–ಅಸಂಬದ್ಧತೆಯನ್ನು ಲೇವಡಿ ಮಾಡುತ್ತಿದೆ ಎನ್ನಬೇಕೆ? ಬಹುಶಃ ಹೌದು. ಇಲ್ಲವೆಂದುಕೊಂಡೂ ನಿರುಮ್ಮಳ ಓದಿಬಿಡಬಹುದಾದ ಒಂದು ಆಯಾಮವನ್ನೆಲ್ಲಿಯೂ ಬಿಟ್ಟುಕೊಡದೆ ಈ ಕತೆಯನ್ನು ನೇಯುತ್ತಾರೆ ನುಗುಡೋಣಿಯವರು.

ಇಲ್ಲಿನ 'ತುಳಸಿ', 'ಅರಿವು ಮರಳಿದ ವೇಳೆ' ಮತ್ತು 'ಒಂದು ಚಿತ್ರ' ಕತೆಗಳನ್ನೂ ಸೇರಿ ಎಲ್ಲ ಏಳು ಕತೆಗಳಲ್ಲಿಯೂ ತಂತ್ರ ಮತ್ತು ನಿರೂಪಣೆಯ ಹದವಾದ ನಿಯಂತ್ರಣದ ಮುಖೇನ ನುಗಡೋಣಿಯವರು ಮೆರೆದ ಜಾಣತನ ಕೂಡ ತುಂಬ ಇಷ್ಟವಾಗುವಂತಿದೆ. ಹಾಗೆಯೇ ಸಮಕಾಲೀನ ಸಮಾಜದ ಬಿಕ್ಕಟ್ಟುಗಳಿಗೆ ಕೈಯಿಕ್ಕುವಾಗ ನಿಭಾಯಿಸಬೇಕಾದ ಒಂದು ಸೂಕ್ಷ್ಮದ ಅರಿವೂ ನುಗಡೋಣಿಯವರನ್ನು ಕಾಡಿರುವುದನ್ನು ನಾವು ಕಾಣಬಹುದು. ಅದು ಮುತ್ತಪ್ಪನನ್ನು ಪ್ರಶ್ನಿಸುವ ಹುಡುಗಿಯ ಕತೆಯಲ್ಲಿ, ತುಳಸಿಯ ಕತೆಯಲ್ಲಿ, ದೇವಮ್ಮನ ಕತೆಯಲ್ಲಿ, ಶಾಂತಿ ಕುಟೀರದ ಕತೆಯಲ್ಲಿ ಮತ್ತೆ ಮತ್ತೆ ಕಣ್ಣಿಗೆ ಕಟ್ಟುತ್ತದೆ. ಈ ಬಗೆಯ ನಿರ್ವಹಣೆ ಕುತೂಹಲಕರ. ಅದೇ ಮಲ್ಲಯ್ಯನ ಕತೆಯಲ್ಲಿ, ಚುಕ್ಕಿಯ ಕತೆಯಲ್ಲಿ, ಹನ್ಮನ ಕತೆಯಲ್ಲಿ ಈ ಜಾಣತನವೇ ಹೆಚ್ಚು ಆಳವಾದ ವಿವೇಚನೆಯಾಗಿ ಹಬ್ಬುತ್ತದೆ. ಆರಂಭದಿಂದ ನುಗಡೋಣಿಯವರ ಕತೆಗಳನ್ನೇ ಒಟ್ಟಾಗಿ ಓದುತ್ತ ಬಂದರೆ ಮನುಷ್ಯ ಸಂಬಂಧಗಳು, ಗ್ರಾಮ–ನಗರ ಸಂಬಂಧಗಳು, ಬದುಕಿನ ಆದ್ಯತೆಗಳು, ಹಣ ಮತ್ತು ಆಸ್ತಿ ಮನುಷ್ಯನ ಜೀವನದೃಷ್ಟಿಯನ್ನು, ಮೌಲ್ಯಗಳನ್ನು ಮತ್ತು ಸೂಕ್ಷ್ಮತೆಯನ್ನು ಪ್ರಭಾವಿಸಿರುವ ಬಗೆ ನಮಗೆ ಒದಗಿಸುವ ನೋಟದಲ್ಲಿಯೇ ತುಂಬ ಸೂಕ್ಷ್ಮವಾದ ಪಲ್ಲಟಗಳನ್ನು ಗಮನಿಸುವುದು ಸಾಧ್ಯವಾಗುತ್ತದೆ. ನಮ್ಮ ಬಹುಪಾಲು ಕತೆಗಾರರಲ್ಲಿ ಕಾಣಲು ಸಿಗದ ಅಪರೂಪದ ಒಂದು ವಿದ್ಯಮಾನವಿದು.